PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಉ.ವಾ.

ದಿನಾಂಕ : DATE: 19-12-20

# ಪರಿಷತ್ ಗಲಾಟೆ ಪ್ರಕರಣ: ನೀತಿ ನಿರೂಪಣಾ ಸಮಿತಿಗೆ?

• ಶಂಕರ ಪಾಗೋಜಿ

ಬೆಂಗಳೂರು: ತಮ್ಮ ವಿರುದ್ಧ ಆರೋಪ ಮಾಡಿರುವ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಅವರ ದೂರಿನ ಬಗ್ಗೆ ಪರಿಶೀಲಿಸುವಂತೆ ಸಭಾಪತಿ ಕೆ. ಪ್ರತಾಪಚಂದ್ರ ಶೆಟ್ಟಿ ಶಿಸ್ತು ಸಮಿತಿಗೆ ಶಿಫಾರಸು ಮಾಡಲು ಚಿಂತನೆ ನಡೆಸಿದ್ದಾರೆ. ಡಿ.15ರಂದು ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆಯಲ್ಲಿ ತಮ್ಮ ನಿರ್ಧಾರ ಹಾಗೂ ನಡವಳಿಕೆಯ ಬಗ್ಗೆ ದೂರುಗಳು ಬಂದಿರುವುದರಿಂದ, ತಮ್ಮ ನಡವಳಿಕೆ ಹಾಗೂ ನೀಡಿರುವ ರೂಲಿಂಗ್‌ನಲ್ಲಿ ನಿಯಮ ಉಲ್ಲಂಘನೆಯಾಗಿಲ್ಲ ಎಂಬುದನ್ನು ಸಾಬೀತು ಪಡಿಸಲು ಸಭಾಪತಿ ಮುಂದಾಗಿದ್ದಾರೆಂದು ತಿಳಿದು ಬಂದಿದೆ.

ನೀತಿ ನಿರೂಪಣಾ ಸಮಿತಿಗೆ ಉಪ ಸಭಾಪತಿಯೇ ಅಧ್ಯಕ್ಷರಾಗಿದ್ದು ಅವರ ವಿರುದ್ಧವೂ ಆರೋಪ ಕೇಳಿ ಬಂದಿದೆ. ಇದರಿಂದ ತಾಂತ್ರಿಕ ಸಮಸ್ಯೆ ಉಂಟಾಗಲಿದೆಯಾ ಎನ್ನುವ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆದು ತೀರ್ಮಾನ ಕೈಗೊ[illegible]ಗಿದ್ದಾರೆಂದು ತಿಳಿದು ಬಂದಿದೆ. ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆ ಬಗ್ಗೆ

> ದೂರು ಕೊಡುವವರು ವಿಧಾನ ಪರಿಷತ್ ಕಾರ್ಯದರ್ಶಿಗೆ ನೀಡಿದರೆ, ಅವರು ನೀತಿ ನಿರೂಪಣಾ ಸಮಿತಿಗೆ ನೀಡುತ್ತಾರೆ. ಸಭಾಪತಿ ವಿರುದ್ಧವೂ ದೂರು ಕೊಡಬಹುದು. ಆದರೆ, ಕೆಲವು ಪ್ರಕರಣಗಳಲ್ಲಿ ಸಭಾಪತಿ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿಲ್ಲ.
>
> • ಡಿ.ಎಚ್.ಶಂಕರ ಮೂರ್ತಿ, ಮಾಜಿ ಸಭಾಪತಿ.

ಬಿಜೆಪಿ ಸದಸ್ಯ ಆಯನೂರು ಮಂಜುನಾಥ ಸಭಾಪತಿಗೆ ಲಿಖಿತ ದೂರು ಸಲ್ಲಿಸಿದ್ದು ಆ ದೂರಿನ ಅನ್ವಯ ಸಭಾಪತಿ ಕೆ. ಪ್ರತಾಪಚಂದ್ರ ಶೆಟ್ಟಿ ಪರಿಷತ್ತಿನ ನೀತಿ ನಿರೂಪಣಾ ಸಮಿತಿಗೆ ಮುಂದಿನ ಕ್ರಮಕ್ಕಾಗಿ ಒಪ್ಪಿಸಲು ಚಿಂತನೆ ನಡೆಸಿದ್ದಾರೆಂಬ ಮಾಹಿತಿ ಲಭ್ಯವಾಗಿದೆ.

**ಏನಿದೆ ನಿಯಮ?:** ಪರಿಷತ್ತಿನ ನಡಾವಳಿ ನಿಯಮ 242 ಸಿ(1) ಪ್ರಕಾರ ಸದನದಲ್ಲಿ ಶಿಸ್ತು ಮತ್ತು ಸಭ್ಯತೆ ಕಾಪಾಡಿಕೊಂಡು ಹೋಗಲು ಸದನದ ಒಳಗೆ ಮತ್ತು ಹೊರಗೆ ಸದಸ್ಯರು ಪಾಲಿಸತಕ್ಕ ನೀತಿ ಸಂಹಿತೆ

> ಸದನದ ಒಳಗೆ ಮತ್ತು ಹೊರಗೆ ಸದಸ್ಯರ ನಡವಳಿಕೆ ಸದನದ ಘನತೆ, ಗಾಂಭೀರ್ಯಕ್ಕೆ ಹೊರತಾಗಿದ್ದ ಸಂದರ್ಭದಲ್ಲಿ ಶಿಸ್ತು ಸಮಿತಿ ಅದನ್ನು ವಿಚಾರಣೆ ಮಾಡುವ ಅಧಿಕಾರ ಇದ್ದರೂ ಕೂಡ, ಶಿಫಾರಸು ಮಾಡುವ ಅಧಿಕಾರ ಮಾತ್ರ ಇದೆ. ಅಂತಿಮ ತೀರ್ಮಾನ ಸದನವೇ ಮಾಡಬೇಕಾಗುತ್ತದೆ.
>
> • ಬಿ.ಎಲ್. ಶಂಕರ್, ಮಾಜಿ ಸಭಾಪತಿ

ಮತ್ತು ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ಎಲ್ಲ ವಿಷಯಗಳ ಪರಿಶೀಲನೆಗಾಗಿ ನೀತಿ ನಿರೂಪಣಾ ಸಮಿತಿ ರಚಿಸಲಾಗಿದೆ. ಈ ಸಮಿತಿಗೆ ಉಪ ಸಭಾಪತಿ ಅಧ್ಯಕ್ಷರಾಗಿದ್ದು ಎಲ್ಲ ಪಕ್ಷಗಳ ಸದಸ್ಯರನ್ನೊಳಗೊಂಡ 6 ಸದಸ್ಯರಿರುತ್ತಾರೆ. ಸಮಿತಿಯು ಪರಿಷತ್ತಿನ ನಡಾವಳಿ 303, 303ಎ, ಬಿ. ಮತ್ತು 306 ನೇ ನಿಯಮಗಳ ಪ್ರಕಾರ ಸದನದ ಒಳಗೆ/ ಹೊರಗೆ ಶಿಸ್ತು ಉಲ್ಲಂಘನೆ, ಸದನದ ಘನತೆಗೆ ಭಂಗ ತಂದಿದ್ದಾರೆ ಎನ್ನುವುದನ್ನು ನಿರ್ಧರಿಸಲು ಅವಕಾಶ ಕಲ್ಪಿಸಲಾಗಿದೆ. ಸಭಾಪತಿಯನ್ನು ಹೊರತು ಪಡಿಸಿ ಸಚಿವರನ್ನೊಳಗೊಂಡಂತೆ ಸದನದ ಯಾವುದೇ ಸದಸ್ಯರ ವಿರುದ್ಧ ಸಭಾಪತಿಗೆ ದೂರು ಸಲ್ಲಿಸಲು ಅವಕಾಶವಿದೆ.

**ಉಪ ಸಭಾಪತಿ ವಿರುದ್ಧ ಆರೋಪ:** ಡಿ.15ರಂದು ನಡೆದ ಘಟನೆಯಲ್ಲಿ ಉಪಸಭಾಪತಿ ಧರ್ಮೇಗೌಡರು ಅಕ್ರಮವಾಗಿ ಸಭಾಪತಿ ಕುರ್ಚಿಯ ಮೇಲೆ ಕುಳಿತುಕೊಂಡಿದ್ದು ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಪ್ರತಿಪಕ್ಷದ ನಾಯಕ ಎಸ್.ಆರ್.ಪಾಟೀಲ್ ಆಗ್ರಹಿಸಿದ್ದರು. ಆದರೆ, ಈ ಬಗ್ಗೆ ಅವರಾಗಲಿ ಅಥವಾ ಕಾಂಗ್ರೆಸ್ ಆಗಲಿ ಸಭಾಪತಿಗೆ ಅಧಿಕೃತ ದೂರು ಸಲ್ಲಿಸಿಲ್ಲ. ಆದರೆ, ಬಿಜೆಪಿ ಸದಸ್ಯ ಆಯನೂರು ಮಂಜುನಾಥ ಉಪ ಸಭಾಪತಿ ಮೇಲೆ ಹಲ್ಲೆ ಹಾಗೂ ಗಲಾಟೆ ಮಾಡಿರುವ ಆರೋಪದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸದಸ್ಯರ ಮೇಲೆ ಕ್ರಮ ಕೈಗೊಳ್ಳುವಂತೆ ಸಭಾಪತಿಗೆ ದೂರು ದಾಖಲಿಸಿದ್ದಾರೆ.

ನಿಯಮಗಳ ಪ್ರಕಾರ ಉಪ ಸಭಾಪತಿ ವಿರುದ್ಧ ದೂರು ಬಂದರೆ, ಅವರನ್ನು ಸಮಿತಿಯ ಹೊರಗಿಟ್ಟು ಸಮಿತಿಯ ಬೇರೊಬ್ಬ ಸದಸ್ಯರನ್ನು ಸಮಿತಿ ಅಧ್ಯಕ್ಷರನ್ನಾಗಿ ಮಾಡಿ, ಅವರ ವಿರುದ್ಧ ಬಂದಿರುವ ದೂರಿನ ಬಗ್ಗೆಯೂ ಪರಿಶೀಲನೆ ನಡೆಸಿ, ಸದನಕ್ಕೆ ವರದಿ ಸಲ್ಲಿಸುವಂತೆ ಸೂಚಿಸಲು ಅವಕಾಶವಿದೆ.

ಒಂದು ವೇಳೆ ದೂರು ದಾಖಲಾಗದಿದ್ದರೂ, ಸಮಿತಿ ಅಗತ್ಯವೆಂದು ಕಂಡು ಬಂದಲ್ಲಿ ನೀತಿ ನಿರೂಪಣೆಯ ವಿಚಾರಗಳನ್ನು ತಾನೇ ಕೈಗೆತ್ತಿಕೊಳ್ಳಬಹುದು. ಇಂತಹ ಪ್ರಕರಣದಲ್ಲಿ ಅನಗತ್ಯ, ಕ್ಷುಲ್ಲಕ ಕಾರಣಕ್ಕೆ ದೂರು ನೀಡಲಾಗಿದೆ ಎಂದು ಕಂಡು ಬಂದರೆ ದೂರು ನೀಡಿರುವ ಸದಸ್ಯರ ವಿರುದ್ಧವೇ ಕ್ರಮಕ್ಕೆ ಶಿಫಾರಸು ಮಾಡಲು ಸಮಿತಿಗೆ ಅಧಿಕಾರವಿದೆ.

**ಯಾವ ಶಿಕ್ಷೆಗೆ ಶಿಫಾರಸು?:** ನೀತಿ ನಿರೂಪಣಾ ಸಮಿತಿಗೆ ಯಾವುದೇ ಸದಸ್ಯ ಸದನದ ಒಳಗೆ ಮತ್ತು ಹೊರಗೆ ನೀತಿ ಸಂಹಿತೆ, ಸಭ್ಯತೆ, ನಿಯಮಗಳ ಉಲ್ಲಂಘನೆ ಮಾಡಿದ್ದಾರೆಂದು ಮನವರಿಕೆಯಾದರೆ, ಅಂತಹ ಸದಸ್ಯರ ವಿರುದ್ಧ ಎಚ್ಚರಿಕೆ ನೀಡುವ, ಛೀಮಾರಿ ಹಾಕುವ, ವಾಗ್ದಂಡನೆ ವಿಧಿಸುವ, ಸದನದಿಂದ ಹೊರಗೆ ಕಳುಹಿಸುವ ಅಥವಾ ನಿರ್ದಿಷ್ಟ ಅವಧಿವರೆಗೆ ಸದನದಿಂದ ಅಮಾನತು ಮಾಡುವ ಶಿಫಾರಸು ಮಾಡಲು ಸಮಿತಿಗೆ ಅಧಿಕಾರ ಕಲ್ಪಿಸಲಾಗಿದೆ.